


### ಯುವ ಮನಗಳ ಅನಾವರಣ

'ಮದುವೆಗಳ ಮರಣೋತ್ತರ ಪರೀಕ್ಷೆ' (ಆ. 21, ಶಿವಕುಮಾರ ಮಾವಲಿ) ಕಥೆ ಬಹಳ ಚೆನ್ನಾಗಿದೆ. ಇಂದಿನ ಯುವ ಮನಸ್ಸುಗಳ ಅನಾವರಣ ಎನ್ನಬಹುದು. ಕಥೆಯ ನಡೆ ಹೊಸ ರೂಪ ಪಡೆದಿದೆ. ಮರಣೋತ್ತರ ಪರೀಕ್ಷೆ... ಮದುವೆಗೆ ಅನಿವಾರ್ಯ ಹೌದೆನಿಸಿತು.

—ಗಂಗಾಧರ್ ಪನಿಯೂರ್

### ಸಹಿಸುವವರೆಗೂ ಸಂಸಾರ...

ಕಥೆ ಓದುತ್ತ ನನಗೆ ಅನಿಸಿದ್ದು, ಈ ಪುರುಷ ಪ್ರಧಾನ ಸಮಾಜದಲ್ಲಿ ಯಾವಾಗಲೂ ಹೆಂಡತಿ ಗಂಡನಿಗಿಂತ ಕೆಳಗೆ ಇರಬೇಕು ಅಂತ ಬಯಸುವವರೇ ಹೆಚ್ಚು. ಹೆಂಡತಿ ಕೂಡ ನನ್ನಷ್ಟೇ ಸಮಾನಳು ಅಂತ ತಿಳಿಯುವವರ ಸಂಖ್ಯೆ ತೀರಾ ಕಮ್ಮಿ.

ಕಥೆಯಲ್ಲಿ ತಾತ ಅಜ್ಜಿ ಪಾತ್ರ ಹೇಳಿದ್ದು ಕೇಳಿದರೆ, ಎಲ್ಲಿವರೆಗೂ ಹೆಂಡತಿ ಎಲ್ಲವನ್ನೂ ಸಹಿಸುವಳೋ ಅಲ್ಲಿಯವರೆಗೂ ಸಂಸಾರ ಚೆನ್ನಾಗಿರುತ್ತೆ ಅಷ್ಟೆ. ಕೊನೆಯದಾಗಿ ನನ್ನಲ್ಲಿ ಉಳಿದ ಪ್ರಶ್ನೆ, ಹೆಣ್ಣಿಗಿರುವ ತಾಳ್ಮೆ, ಕರುಣೆ, ಸಹನೆ, ಹೆಚ್ಚಿನ ಗಂಡುಮಕ್ಕಳಿಗೆ ಯಾಕೆ ಇರುವುದಿಲ್ಲ? ಅಂತ.

—ಕವಿತ ಅಶೋಕ್, ನೆಲಮಂಗಲ

### ವೈಶಾಲ್ಯ ನಿರೂಪಿಸಿದೆ

'ವಿಯೆಟ್ನಾಂ ಯುದ್ಧ; ದೊಡ್ಡಣ್ಣ ಬೆಚ್ಚಿಬಿದ್ದ' (ಆ. 14, ಪ್ರವೀಣ ಕುಲಕರ್ಣಿ) ಪ್ರವಾಸ ಕಥನ ಓದುಗರನ್ನು ಗಂಭೀರ ಚಿಂತನಕ್ಕೆ ಆಗ್ರಹಿಸುವಂತಿದೆ. ಶತಮಾನದಿಂದಲೂ ಜಗತ್ತಿನ ಯಾವ ಪ್ರದೇಶದಲ್ಲಾದರೂ ಸಮರ ಸನ್ನಿವೇಶ ನಿರ್ಮಿಸುತ್ತ, ಉಳಿದ ಬಹುಭಾಗಗಳಲ್ಲಿ ಯುದ್ಧ ಸನ್ನದ್ಧ ಸ್ಥಿತಿಯನ್ನು ಪೋಷಿಸುತ್ತಾ ಸಾಗುತ್ತಿರುವ ದೈತ್ಯ ಶಕ್ತಿಯ ಅಮಾನುಷತೆಯನ್ನು ಅನಾವರಣಗೊಳಿಸುವಲ್ಲಿ ಲೇಖನ ಕೃತಕೃತ್ಯವಾಗಿದೆ. ಯುದ್ಧಕೋರ ನೀತಿಯಲ್ಲಿ ಮಡುಗಟ್ಟಿರುವ ಕ್ರೌರ್ಯಘೋರತೆಯ ಮೇಲೆ ಬೆಳಕು ಚೆಲ್ಲುವ ಇಂತಹ ಯತ್ನದ ಮುಖೇನ ಪ್ರಾದೇಶಿಕ ಭಾಷಾ ಸಾಪ್ತಾಹಿಕವೊಂದು ತನ್ನ ವೈಶಾಲ್ಯ ನಿರೂಪಿಸಿದೆ.

—ಶಂಕರ್ ಸೊರವನಹಳ್ಳಿ, ಮಾಯಸಂದ್ರ



### ಮನಸ್ಥಿತಿ ಬದಲಾಗಲಿ


'ಅರಳುವ ಹೂವುಗಳೇ ಆಲಿಸಿರಿ' (ಆ. 21, ಡಾ. ಗಿರಿಧರ ರಾವ್ ಹವಲ್ದಾರ್) ಚೆನ್ನಾಗಿದೆ. ಹೆಚ್ಚು ಅಂಕ ಪಡೆಯಬೇಕೆಂದು ಪಾಲಕರಿಂದ, ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಶಿಕ್ಷಣ ಸಂಸ್ಥೆಗಳಿಂದ ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರಲಾಗುತ್ತಿದೆ. ಆತ್ಮಹತ್ಯೆ ತಡೆಗಟ್ಟುವ ಸುಪ್ರೀಂ ಕೋರ್ಟ್ ಮಾರ್ಗಸೂಚಿ ಸ್ವಾಗತಾರ್ಹ. ಈಗಲಾದರೂ ಎಲ್ಲರ ಮನಸ್ಥಿತಿ ಬದಲಾಗಲಿ.

—ಜಗದೀಶ ಬಿ. ಗೌಡ, ಧಾರವಾಡ

### ದುರಂತದ ಕಡೆ ಸಾಗದಿರಲಿ

'ಬಾಳುವಂಥ ಹೂವಿಗೇಕೆ ಬಾಡುವಾಸೆ?' (ಆ. 21, ರಶ್ಮಿ ಎಸ್) 'ನಿಮ್ಮೊಡನೆ' ಬರಹವು ಶಿಕ್ಷಕರು, ಪೋಷಕರು ಹಾಗೂ ಸಮಾಜದ ಕಣ್ಣು ತೆರೆಸುವಂತಿದೆ. ಆಡಿ ನಲಿಯುವ, ನೋಡಿ ಕಲಿಯುವ ಮಕ್ಕಳ ಮನಸ್ಸು ಬಾಡುವಂತಾಗಿರುವುದರ ಹಿಂದೆ ನಮ್ಮ ವೇಗದ ಬದುಕು, ಸ್ಪರ್ಧಾ ಜಗತ್ತಿನ ಒತ್ತಡವಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಆದರೆ ಅದು ದುರಂತದ ಕಡೆ ಸಾಗಬಾರದಲ್ಲ?

—ಹುರುಕಡ್ಲಿ ಶಿವಕುಮಾರ
ಬಾಚಿಗೊಂಡನಹಳ್ಳಿ



### ಆತ್ಮಾವಲೋಕನದ ಸಮಯ

ಪ್ರತಿಯೊಬ್ಬ ಪೋಷಕರು, ಶಿಕ್ಷಕರು ಮತ್ತು ಸಮಾಜದ ಸದಸ್ಯರು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ತುರ್ತುಕರೆ ಈ ಬರಹ. ಮಕ್ಕಳ ಮಾನಸಿಕ ಆರೋಗ್ಯಕ್ಕೆ ಹೆಚ್ಚಿನ ಗಮನ ನೀಡುವುದು, ಅವರೊಂದಿಗೆ ಭಾವನಾತ್ಮಕವಾಗಿ ಬೆರೆಯುವುದು ಮತ್ತು ಶೈಕ್ಷಣಿಕ ಒತ್ತಡವನ್ನು ಕಡಿಮೆ ಮಾಡುವುದು ಈ ಸಮಸ್ಯೆಗೆ ಪ್ರಮುಖ ಪರಿಹಾರಗಳು. ಪ್ರತಿಯೊಂದು ಮಗುವೂ ಹೂವಿನಂತೆ ಅನನ್ಯ. ಅವರ ಬದುಕನ್ನು ಅರಳಲು ಬಿಡುವುದು ನಮ್ಮೆಲ್ಲರ ಜವಾಬ್ದಾರಿ.

—ಹೊಸ್ಮನೆ ಮುತ್ತು, ಬೆಂಗಳೂರು

### ಭಾವನಾತ್ಮಕ ಸ್ಥಿರತೆ ಬೆಳೆಯಲಿ

ವಿದ್ಯಾರ್ಥಿಗಳಲ್ಲಿ ಆತ್ಮಹತ್ಯಾ ಪ್ರವೃತ್ತಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಮುದಾಯ ಆಧಾರಿತ ಹಸ್ತಕ್ಷೇಪ ಅಗತ್ಯವಿದೆ. ಮಾನಸಿಕ ಆರೋಗ್ಯ ಸೇವೆಗಳ ವ್ಯಾಪ್ತಿಯನ್ನು ವಿಸ್ತರಿಸುವುದು ಇದಕ್ಕೆ ಸಹಾಯವಾಗಬಲ್ಲದು. ಶಾಲೆಗಳಲ್ಲಿ ಮಾನಸಿಕ ಆರೋಗ್ಯ ಶಿಕ್ಷಣ ನೀಡುವುದು ಮಕ್ಕಳಲ್ಲಿ ಭಾವನಾತ್ಮಕ ಸ್ಥಿರತೆ ಬೆಳೆಸುವುದಕ್ಕೂ ಸಹಾಯ ಮಾಡುತ್ತದೆ. ವಿದ್ಯಾರ್ಥಿಗಳನ್ನು ಬೆಂಬಲಿಸುವ ಪರಿಸರ ನಿರ್ಮಾಣ ವಿದ್ಯಾರ್ಥಿ ಆತ್ಮಹತ್ಯೆಗಳನ್ನು ತಡೆಯಲು ದೀರ್ಘಕಾಲಿಕ ರಕ್ಷಣಾತ್ಮಕ ವ್ಯವಸ್ಥೆಯನ್ನು ನೀಡಿದಂತೆ.

—ಪಿ.ವಿ. ಪ್ರಕಾಶ್, ಮುಂಬೈ

### ಲೈಂಗಿಕ ಶಿಕ್ಷಣದ ಆದ್ಯತೆ

'ಸ್ವೀಟ್ 16; ಪ್ರೀತಿ, ಪ್ರೇಮ, ಪ್ರಣಯ...' (ಆ. 21) ಮುಖಪುಟ ಲೇಖನಗಳು, ಹಲವು ಆಯಾಮಗಳಲ್ಲಿ ಹದಿಹರೆಯದ ಪಲ್ಲಟಗಳನ್ನು ತೆರೆದಿಟ್ಟಿವೆ. ಹದಿನಾರರ ಹರೆಯದ ಮನ್ವಂತರಕ್ಕೆ ಸಂಬಂಧಿಸಿದಂತೆ ಶಿಕ್ಷಣ ತಜ್ಞರು, ಮನಶಾಸ್ತ್ರಜ್ಞರು, ವೈದ್ಯರು ಹಾಗೂ ಕಾನೂನು ತಜ್ಞರ ವಿಶ್ಲೇಷಣೆಗಳು ಸಮಂಜಸವಾಗಿವೆ. ಹರೆಯಕ್ಕೆ ಕಾಲಿಟ್ಟ ಮಕ್ಕಳಲ್ಲಿ ಒಪ್ಪಿತ ಲೈಂಗಿಕತೆ ತಪ್ಪೇ ಸರಿಯೇ ಎಂದು ಚರ್ಚಿಸುವ ಮುನ್ನ ನಮ್ಮಲ್ಲಿ ಲೈಂಗಿಕ ಶಿಕ್ಷಣ ಸೂಕ್ತ ರೀತಿಯಲ್ಲಿ ಮಕ್ಕಳಿಗೆ ದೊರೆಯುವುದೂ ಅವಶ್ಯಕ ಎಂಬುದನ್ನು ಒಪ್ಪಲೇಬೇಕಾಗಿದೆ.

—ಚೇತನಾ, ಮೈಸೂರು

### ಕವಳ

ಹದಿಹರೆಯದ ತವಕ—ತಲ್ಲಣ—ತಳಮಳ—ಕಳವಳ ಕಾವಳಗಳ 'ಕವಳ' (ಕವಳಿಗೆ) ಈ ಸಂಚಿಕೆಯ ವಿಶಿಷ್ಟ ಪುಟಗಳಲ್ಲಿ ಸುಪ್ರಕಟ!

—ಸಿಪಿಕೆ, ಮೈಸೂರು

### ವಿವೇಚನೆಯ ಮಾರ್ಗವಿರಲಿ

ಹದಿಹರೆಯದ ವಯಸ್ಸಿನಲ್ಲಿ ಮನಸ್ಸು ಸ್ಥಿಮಿತ ಇರುವುದಿಲ್ಲ. ಈ ವಯಸ್ಸಿನಲ್ಲಿ ಪ್ರೀತಿ, ಪ್ರೇಮ ಸಹಜವಾದರೂ ವಿವೇಚನೆಯಿಲ್ಲದ ನಡೆ ಜೀವನಕ್ಕೆ ಮಾರಕವಾಗಬಹುದು. ಜೀವನದ ಹಲವು ಮಜಲುಗಳನ್ನು ಏರಿ ವಿದ್ಯಾವಂತರಾಗುವ ಗುರಿಗೆ ಪ್ರಥಮ ಆದ್ಯತೆ ನೀಡಬೇಕು ಎನ್ನುವುದು ನನ್ನ ಅಭಿಪ್ರಾಯ.

—ಮಧು, ಬೆಂಗಳೂರು

### ಬೇಕು ಮಾರ್ಗದರ್ಶನ

ಪ್ರೀತಿ, ಪ್ರೇಮ, ಪ್ರಣಯ... ಇದುವೇ ಹದಿಹರೆಯ! ಹದಿನಾರರ ಷೋಡಶ, ಷೋಡಶಿಯರಿಗೆ ಬೇಕು ಪೋಷಕರ ಮಾರ್ಗದರ್ಶನ! ಆಗ ಮಾತ್ರ ಸಾಧ್ಯ ಭವಿಷ್ಯದ ಉತ್ತಮ ಜೀವನ ದರ್ಶನ!

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ—ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ—ಮೇಲ್: feedback@sudha.co.in